ಮುಖ್ಯಮಂತ್ರಿಯಂಪರಿಂದ ಹೇಳಿಕೆ

ಕರ್ನಾಟಕ ಪವರ್ ಕಾರ್ಪೊರೇಷನ್ನಿನ ಪದವೀಧರ ಇಂಜನೀಯರುಗಳ ಮುಷ್ಕರದ ಬಗೆ

† ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ, ನೀರಾವರಿ, ವಿದ್ಯುಚ್ಛಕ್ತಿ ಸಚಿವರು).—ಅಧ್ಯಕ್ಷರೇ, ಕರ್ನಾಟಕ ಪವರ್ ಕಾರ್ಪೊರೇಷನ್‌ನ ಗ್ರಾಜ್ಯುಯೇಟ್ ಇಂಜಿನಿಯರುಗಳು ಅನಿರ್ದಿಷ್ಟ ಕಾಲ ಮುಷ್ಕರ ಮಾಡುತ್ತೇವೆ ಎಂದು ಹೇಳಿ ಮುಷ್ಕರ ನೋಟೀಸನ್ನು ದಿನಾಂಕ ೧೫-೩-೯೦ಕ್ಕೆ ಕರ್ನಾಟಕ ಪವರ್ ಕಾರ್ಪೊರೇಷನ್‌ಗೆ ಸಲ್ಲಿಸಿದ್ದಾರೆ- ಅದನ್ನು ೧೮-೩-೯೦ ರಲ್ಲಿ ಪತ್ರಿಕೆಗಳಿಗೆ ಕೂಡ ಅವರು ತಮ್ಮ ಬೇಡಿಕೆಗಳನ್ನು ಒತ್ತಾಯಪೂರ್ವಕವಾಗಿ ನಾವು ಸ್ಟ್ರೈಕ್ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಜಾಹೀರಾತಿನ ಮೂಲಕ ಕೊಟ್ಟಿದ್ದಾರೆ ಈ ಒಂದು ಸ್ಟ್ರೈಕ್ ಮಾಡತಕ್ಕದ್ದರಿಂದ ಕೆ. ಪಿ. ಸಿ. ಯಲ್ಲಿ ೮ ಸಾವಿರ ನೌಕರರು ಇದ್ದು ಸುಮಾರು ಎಂಟು ಅಸೋಸಿಯೇಷನ್‌ಗಳನ್ನು ಹೊಂದಿರತಕ್ಕಂಥ ಒಂದು ಪ್ರತಿಷ್ಠಿತ ಕಾರ್ಪೊರೇಷನ್ ಇದು. ಒಂದು ದಿನಕ್ಕೆ ೩ಳ ಮಿಲಿಯನ್ ಯೂನಿಟ್‌ಗಳಷ್ಟು ಪವರ್ ತಯಾರ್ ಮಾಡತಕ್ಕಂಥ ಒಂದು ಪ್ರಮುಖವಾದ ಕಾರ್ಪೊರೇಷನ್. ಮಾನ್ಯ ಸದಸ್ಯರು ಹೇಳಿದ ಹಾಗೆ ಒಂದು ದಿನಕ್ಕೆ ಒಂದು ಕೋಟಿ ರೂಪಾಯಿ ನಷ್ಟ ಪಾಗುತ್ತಿದ್ದು ರಾಜ್ಯದ ಏಕನಾಮಿ ಮೇಲೆ ಒಂದು ದಿನಕ್ಕೆ ೧೫ ಕೋಟಿ ನಷ್ಟ ಸಂಭವಿಸುತ್ತದೆ ಎನ್ನತಕ್ಕಂಥ ಪರಿಸ್ಥಿತಿ. ಇರತಕ್ಕಂಥ ಸಮಯದಲ್ಲಿ ಈ ಒಂದು ಸ್ಟ್ರೈಕ್ ಸಾಧು ಅಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ಸಾಧು ಅಲ್ಲ ಎನ್ನುವ ನಿರ್ಣಯಕ್ಕೆ ಸರ್ಕಾರ ಬಂದು Essential Services Maintenance Act ನ ಸೆಕ್ಷನ್ ೩ ನ್ನು ಇಂಪ್ಲಿಮೆಂಟ್ ಮಾಡುವುದು ಸರ್ಕಾರಕ್ಕೆ ಅನಿವಾರ್ಯ ಎಂದು ಕಂಡು ಬಂದಿದ್ದರಿಂದ ೨೧-೩-೯೦ ರಂದು ಇದನ್ನು ಇಂಪ್ಲಿಮೆಂಟ್ ಮಾಡತಕ್ಕ ದೃಷ್ಟಿಯಿಂದ ನೋಟೀಸನ್ನು ಕೊಟ್ಟಿದ್ದಾರೆ. ಅದು ಇವತ್ತು ಪತ್ರಿಕೆಯಲ್ಲಿ ಬಂದಿದ್ದದ ಪರಿಣಾಮವಾಗಿ ಮಾನ್ಯ ಸದಸ್ಯರು ಶಾಸನ ಸಭೆ ನಡೆಯುವಾಗ ಇದು ಬರಬಾರದಿತ್ತು ಎನ್ನತಕ್ಕ ಮಾತನ್ನು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಅದನ್ನು ಸಭೆಯಲ್ಲಿ ಹೇಳಬೇಕಾಗಿತ್ತು ಎಂದು ನಾವು ಕೇಳಿದ್ದುದು ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಅದನ್ನು ನಾನು ಈಗತಾನೇ ಪರಿಶೀಲನೆ ಮಾಡಿ ನೋಡಿದ್ದೇನೆ, ಇದು ಕಾಯಿದೆಯನ್ನು ಜಾರಿಗೆ ತರತಕ್ಕದ್ದು ಹೊರತು ಹೊಸ ಪಾಲಿಸಿಯನ್ನು ಇನಿಶಿಯೇಟ್ ಮಾಡುವಂಥಾದು ಅಲ್ಲವೆಂದು ಅರಿತಿದ್ದರಿಂದ ಈ ಕಾಯಿದೆಯನ್ನು ಅನುಷ್ಠಾನಕ್ಕೆ ತರತಕ್ಕಂಥ ತೀರ್ಮಾನವನ್ನು ಕೈಗೊಳ್ಳಲಾಯಿತೆಂದು ಅವರಿಗೆ ತಿಳಿಯಬಯಸುತ್ತೇನೆ. ಮತ್ತು Essential Services Maintenance Act ಕೆಳಗಡೆ ಸರ್ಕಾರ ತನ್ನ ನಿಲುವನ್ನು ಜಾಹೀರಾತು ಮೂಲಕ ನೋಟಿಫೈ ಮಾಡುವುದು ಆದರ ಒಂದು ಭಾಗವಾಗಿ ಇದೆಯೆಂದು ಕೂಡ ನಾವು ಅರಿತಿದ್ದರಿಂದ ಅದನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿದ್ದೇವೆ. ಈ ಮಧ್ಯೆ ಈ ಅಸೋಸಿಯೇಷನ್‌ನವರು, ನಾನು ಈ ಒಂದು ವಿಷಯವನ್ನು ಪರಿಹರಿಸಿಕೊಂಡ ಮೇಲೆ ನನ್ನನ್ನು ಭೇಟ್ಟಿಯಾಗಿ ತನ್ನ ಜೊತೆ ಪ್ರಸ್ತಾಪ ಮಾಡಿದ್ದರು. ನಾನು ಸರ್ಕಾರದ ನಿಲುವನ್ನು ಅವರಿಗೆ ತಿಳಿಸಿದ್ದೇನೆ. ವಿನಾಕಾರಣ ಮುಷ್ಕರ ಮಾಡುವುದಾದ್ದು ತಮ್ಮ ಹಿತಕ್ಕಾಗಲೀ, ರಾಜ್ಯದ ಹಿತಕ್ಕಾಗಲೀ ಒಳಿತಲ್ಲ. ಕಾರ್ಪೊರೇಷನ್‌ನವರ ಬೇಡಿಕೆಗಳಿಗೆ ಪುರಸ್ಕಾರ ಕೊಡಲಿಲ್ಲ ಎನ್ನುವ ಕಾರಣಕ್ಕೆ ಮುಷ್ಕರ ಮಾಡುವುದು ಸರಿ ಎನಿಸುವುದಿಲ್ಲ. ಸರ್ಕಾರದ ಮುಂದೆ ನಿಮ್ಮ ಮನವಿಯನ್ನು ಸಲ್ಲಿಸಬೇಕಾಗಿತ್ತು. ಇದರ ಬಿಟ್ಟು ನೀವು ಒಂದು ಹೆಜ್ಜೆ ಮುಂದೆ ಹೋಗಿದ್ದೀರಿ, ಈ ರೀತಿ ಮಾಡುವುದಾಧರೆ, ಬಹುಶಃ ಸರ್ಕಾರ ತನ್ನ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂಬ ವಿಷಯವನ್ನು ಅವರಿಗೆ ಮನದಟ್ಟು ಮಾಡಿದಾಗ, ಅವರು, ಮುಷ್ಕರದ ಭಾವನೆಯಿಂದ್ದನ್ನು ಬಿಟ್ಟು, ಪರಿವರ್ತನೆ ಹೊಂದಿದ್ದಾರೆ, ಪುನಃ ಇವತ್ತು ಎರಡನೇ ಸುತ್ತಿನ ಮಾತುಕತೆ ಆಯಿತು. ಅವರು ಕೇಳಿರತಕ್ಕ ಬೇಡಿಕೆಗಳ್ ಯಾವುವೂ ಪ್ರಮುಖವಾದ ಬೇಡಿಕೆಗಳಲ್ಲ. ಮುಂಖಿತಃ ಕೂತು ಚರ್ಚೆ ಮಾಡಿ ತೀರ್ಮಾನ ಮಾಡಿಕೊಳ್ಳಿತಕ್ಕ ಬೇಡಿಕೆಗಳು. ನಾಲ್ಕೂವರೆ ಗಂಟೆಯಲ್ಲಿ ಕೆ.ಪಿ.ಸಿ. ಯವರು ಮಂತ್ರಿ ಸಂಘದವರನ್ನು ಕರೆಯಿಸಿ, ಎಲ್ಲರೂ ಕೂಳಿತು ಮಾತನಾಡಿದಾಗ, ಬೇಷರತ್ತಾಗಿ ಮುಷ್ಕರವನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಒಪ್ಪಿದ್ದಾರೆ. ಆದ್ದಂದ ೨ಳನೇ ತಾರೀಖಿಂ ಮುಷ್ಕರ ನಡೆಯುವುದಿಲ್ಲವೆಂದು ಹೇಳುತ್ತೇನೆ. ಚರ್ಚೆಯ ಸಂದರ್ಭದಲ್ಲಿ ಅದ ತೀರ್ಮಾನ